## ಅಪರಾಧ ಸುದ್ದಿಗಳಿಗೆ ಪ್ರೈಮ್ ಸ್ಲಾಟ್

ಭಾಷೆ ಯಾವುದೇ ಇರಲಿ, ನ್ಯೂಸ್ ಚಾನೆಲ್‌ಗಳಿಗೆ ರಾತ್ರಿ ಒಂಬತ್ತು ಗಂಟೆ ಸ್ಲಾಟ್ ಬಹು ಮುಖ್ಯ ಸಮಯ. ಹೊಟ್ಟೆಪಾಡಿಗೆ ಹೊರಗೆ ಹೋದವರು ಮನೆಗೆ ಮರಳಿ ಟಿವಿ ಎದುರು ಕುಳಿತು ಊಟ ಮಾಡುತ್ತಾ ಜಗತ್ತಿನಾದ್ಯಂತದ ಆ ದಿನದ ಸಮಗ್ರ ಆಗುಹೋಗುಗಳನ್ನು ಮತ್ತು ಘಟನೆಗಳನ್ನು ನೋಡುವುದು ಲಾಗಾಯ್ತಿನಿಂದ ನಡೆದು ಬಂದ ಪದ್ಧತಿ. ಅಂತೆಯೇ ಟಿವಿ ಚಾನೆಲ್‌ಗಳು ಮತ್ತು ಜಾಹೀರಾತುದಾರರು ಈ ಸ್ಲಾಟ್ ಮೇಲೆ ಸದಾ ಕಣ್ಣಿಡುತ್ತಾರೆ.

ಆದರೆ, ಸುವರ್ಣ ನ್ಯೂಸ್ ರಾತ್ರಿ 9 ಗಂಟೆ ಸ್ಲಾಟ್‌ನಲ್ಲಿ ಅಪರಾಧ ಜಗತ್ತಿನ ಸುದ್ದಿ FIRನ್ನು ಪ್ರಸಾರ ಮಾಡುವುದು ತೀರಾ ವಿಷಾದನೀಯ. ಇದು ಅಪರಾಧದ ಸುದ್ದಿಯನ್ನು ಪ್ರೈಮ್ ಸ್ಲಾಟ್‌ಗೆ ಎಳೆದು ತಂದು ವೈಭವೀಕರಿಸುವ ಪ್ರಯತ್ನವೋ ಅಥವಾ ಬೇರೆ ಸುದ್ದಿ ಚಾನೆಲ್‌ಗಳಿಂದ ತಾನು ಭಿನ್ನ ಎಂದು ತೋರಿಸುವ ಹೊಸ ಆಯಾಮವೋ? ಕೆಲವು ಕಾರ್ಯಕ್ರಮಗಳು ಹಲವು ನಿರ್ದಿಷ್ಟ ಸಮಯದಲ್ಲಿ ಪ್ರಸಾರವಾದರೇ ಅರ್ಥಪೂರ್ಣವಾಗಿರುತ್ತವೆ ಮತ್ತು ಉದ್ದೇಶ ಕೂಡ ಸಾಫಲ್ಯ ಕಾಣುತ್ತದೆ. ಚಾನೆಲ್‌ಗಳು ತಮ್ಮ ಕಾರ್ಯಕ್ರಮದ ಸಮಯದಲ್ಲಿ ಬದಲಾವಣೆ ಮಾಡುವಾಗ ವೀಕ್ಷಕರ ಅಭಿಪ್ರಾಯಗಳನ್ನು ಪರಿಗಣಿಸುವ ಸೌಜನ್ಯ ತೋರಿಸದಿರುವುದೇ ಇದಕ್ಕೆ ಕಾರಣ ಎನ್ನಬಹುದು.

—ರಮಾನಂದ ಶರ್ಮಾ, ಬೆಂಗಳೂರು

## ವಾರದ ಪತ್ರ ಬಲವಂತ ಬೇಡ

ಝೀ ಕನ್ನಡ ವಾಹಿನಿಯ ಸರಿಗಮ ಲಿಟಲ್ ಚಾಂಪ್ಸ್, ಕಾರ್ಯಕ್ರಮಕ್ಕೆ ಅದೇ ವಾಹಿನಿಯ ಡ್ರಾಮಾ ಜೂನಿಯರ್ಸ್ ಅಂತಿಮ ಹಂತಕ್ಕೆ ಆಯ್ಕೆಯಾದ ಸ್ಪರ್ಧಿಗಳು ಅತಿಥಿಗಳಾಗಿದ್ದ ಸಂದರ್ಭ. ನಿರೂಪಕಿ ಪುಟ್ಟ ಅಚಿಂತ್ಯನನ್ನು 'ಡ್ರಾಮಾ ಜ್ಯೂನಿಯರ್ಸ್ ಮುಗಿತಾ ಇದೆ ಅಂತ ನಿಂಗೆ ಬೇಜಾರಾಗ್ತಾ ಇದೆಯಾ?' ಎಂದು ಪ್ರಶ್ನಿಸಿದಾಗ ಆ ಮುಗ್ಧ ಹುಡುಗ 'ಇಲ್ಲ. ತುಂಬಾ ಖುಷಿ ಆಗ್ತಾ ಇದೆ. ಅಲ್ಲಿ ತುಂಬಾ ಕಷ್ಟವಾದದ್ದನ್ನೆಲ್ಲಾ ಹೇಳಿಕೊಡ್ತಾರೆ ಅದಕ್ಕೆ' ಎಂದು ಉತ್ತರಿಸಿದ.

ಈ ನೇರ ಸ್ಪಷ್ಟ ಮಾತು ಅಲ್ಲಿದ್ದ ಹಿರಿಯರ ಮನ ಮುಟ್ಟಿತೋ ಇಲ್ಲವೋ ತಿಳಿಯದು. ಪ್ರತಿಭಾವಂತ ಮಕ್ಕಳ ಹೆತ್ತವರಿಗೆ ಆದಷ್ಟು ಬೇಗ ತಮ್ಮ ಮಕ್ಕಳು ರಿಯಾಲಿಟಿ ಶೋಗಳ ವೇದಿಕೆ ಮೇಲೆ ಜನಪ್ರಿಯತೆ, ಯಶಸ್ಸು, ಹಣ ಗಳಿಸಲಿ ಎಂಬ ಆಸೆ ಸಹಜವಾಗಿರುವಂತೆಯೇ, ಕಿರು ತೆರೆಯ ಶೋ ಗಳ ತಂಡದವರಿಗೂ ಮಕ್ಕಳಿಂದಾಗಿ ತಮ್ಮ ಶೋ ಹೆಚ್ಚು ಟಿ.ಆರ್.ಪಿ. ಗಳಿಸಲಿ ಎಂಬ ಆಸೆ ಇದ್ದೇ ಇರುತ್ತದೆ. ಆದರೆ ಇಂತಹ ದೀರ್ಘಕಾಲೀನ ಸ್ಪರ್ಧೆಗಳಲ್ಲಿ ಸತತವಾಗಿ ಪಾಲ್ಗೊಳ್ಳುವ ಏಕಾಗ್ರತೆ, ಶಿಸ್ತು, ಸಹನೆ ಎಲ್ಲವೂ ಚಂಚಲ ಚಿತ್ತದ, ಆಡುವ ವಯಸ್ಸಿನ ಪುಟ್ಟ ಕಂದಮ್ಮಗಳಿಗೆ ಹಿಂಸೆ ಎನಿಸಬಹುದು. ಹೀಗಾಗಿ ರಿಯಾಲಿಟಿ ಶೋಗಳಲ್ಲಿ ಭಾಗವಹಿಸುವ ಮಕ್ಕಳ ವಯೋಮಿತಿ 5 ರಿಂದ 15ಕ್ಕೆ ಬದಲು 7 ರಿಂದ 15 ಆದರೆ ಒಳ್ಳೆಯದು.

ಪುಟ್ಟ ಮಕ್ಕಳ ಮೊಗ್ಗಿನಂತ ಮನಸ್ಸನ್ನು ಬಲವಂತವಾಗಿ ಅರಳಿಸಲು ಪ್ರಯತ್ನಿಸುವ ಸಾಹಸಬೇಡ. ಮೊಗ್ಗು ತಾನಾಗಿ ಅರಳಿ ಸುವಾಸನೆ ಬೀರಿದರೆ ಸೊಗಸು ಅಲ್ಲವೇ?

—ಮೀರಾ ಮೋಹನ್, ಬೆಂಗಳೂರು

## ಸಮಾಜ ಮರೆತ ಧಾರಾವಾಹಿಗಳು

ಪುಟ್ಟ ಗೌರಿ ಮದುವೆಯಲ್ಲಿನ ಅಪಹರಣ ಪ್ರಕರಣದ ರೀತಿಯಲ್ಲಿ ಮನೆಬಿಟ್ಟು ಹೋದ ನಾಲ್ವರು ಹುಡುಗಿಯರು ಸುರಕ್ಷಿತವಾಗಿ ಮನೆ ಸೇರಿದ್ದು ಇತ್ತೀಚಿನ ಸುದ್ದಿ. ದೃಶ್ಯಮಾಧ್ಯಮಗಳು ತುಂಬ ಪ್ರಭಾವಶಾಲಿ ಎನ್ನುವ ಅರಿವು ಎಲ್ಲರಿಗೂ ಇರಬೇಕಾದುದು ಅವಶ್ಯಕ. ಆದರೆ ಈಗ ಎಲ್ಲ ಚಾನೆಲ್‌ಗಳಲ್ಲಿ ಬಿತ್ತರಗೊಳ್ಳುವ ಬಹಳಷ್ಟು ಧಾರಾವಾಹಿಗಳಲ್ಲಿ ವಿಜೃಂಭಿಸುವ ಸೇಡು, ಕ್ರೌರ್ಯ, ದಬ್ಬಾಳಿಕೆ, ಅನೈತಿಕ ಸಂಬಂಧದ ಜೊತೆ ಒಳ್ಳೆಯ ಪಾತ್ರಗಳಿಗೆ ಕೇಡನ್ನುಂಟು ಮಾಡಲೆಂದೇ ಹುಟ್ಟಿಕೊಂಡ ಖಳನಾಯಕಿಯರು. ಬಾಲ್ಯವಿವಾಹ, ಬಾಲವೈಧವ್ಯ, ಅಂಧಶ್ರದ್ಧೆ, ವಾಮಾಚಾರ, ದೆವ್ವ, ಭೂತ... ಒಂದೆರಡಲ್ಲ. ಇವೆಲ್ಲ ಅನಿಷ್ಟಗಳನ್ನು ಬಳಸಿ ತಯಾರಿಸುವ ಧಾರಾವಾಹಿಗಳು ಸಮಾಜಕ್ಕೆ ಯಾವ ನೀತಿ, ಸಂದೇಶವನ್ನು ಸಾರುತ್ತಿವೆ? ದುಡ್ಡು ಮತ್ತು ಟಿ.ಆರ್.ಪಿ. ಬೆನ್ನುಹತ್ತಿದ ಇಂತಹ ಧಾರಾವಾಹಿಗಳಿಂದ ವಯಸ್ಕರ, ಯುವಜನ ಮನಸ್ಸಿನ ಮೇಲೆ ಯಾವ ದುಷ್ಪರಿಣಾಮ ಉಂಟಾಗುತ್ತದೆ ಎನ್ನುವ ಕಿಂಚಿತ್ತೂ ಸಾಮಾಜಿಕ ಬದ್ಧತೆ ಕಿರುತೆರೆ ಸಮೂಹದಲ್ಲಿ ಇದ್ದಂತೆ ಕಾಣುವುದಿಲ್ಲ.

ಸಮಾಜದ ಸ್ವಾಸ್ಥ್ಯವನ್ನು ಕದಡುವಂತಹ ಇಂತಹ ಧಾರಾವಾಹಿಗಳನ್ನು ತಪ್ಪದೆ ನೋಡುವ ಪ್ರೇಕ್ಷಕವರ್ಗವನ್ನೇ ಅವರು ಸೃಷ್ಟಿಸಿಬಿಟ್ಟಿದ್ದಾರೆ! ನಮ್ಮ ವಿಕೃತತೃಷ್ಟಿಯ ಅಭಿರುಚಿಗೆ ಇವೆಲ್ಲ ಕೈಗನ್ನಡಿಗಳು. ವಾಸ್ತವಕ್ಕೆ ಹತ್ತಿರವಾಗುವಂತಹ ಧಾರಾವಾಹಿಗಳನ್ನು ನೀಡುವ ವಿಚಾರವಂತರ, ಬುದ್ಧಿಜೀವಿಗಳ ಕೊರತೆ ನಮ್ಮ ಕನ್ನಡ ಕಿರುತೆರೆಯಲ್ಲಿ ಇದೆಯೇ ಎಂಬ ಸಂಶಯ ಕಾಡುತ್ತಿದೆ. ತೀಕ್ಷ್ಣ ಪ್ರತಿಕ್ರಿಯೆಗಳಿಂದಲೂ ಕಿರುತೆರೆ ತನ್ನನ್ನು ತಾನು ತಿದ್ದಿಕೊಂಡಿಲ್ಲ. ಇಂತಹ ಧಾರಾವಾಹಿಗಳನ್ನು ಪ್ರೇಕ್ಷಕರು ಒಮ್ಮತದಿಂದ ತಿರಸ್ಕರಿಸುವುದು ಈಗಿರುವ ದಾರಿ.

—ಧರ್ಮಾನಂದ ಶಿರ್ವ, ಬೆಂಗಳೂರು

## ಹುರುಳಿಲ್ಲದ ಕಾರ್ಯಕ್ರಮ

ಒಂದೆರಡು ಅಪವಾದಗಳನ್ನು ಹೊರತುಪಡಿಸಿದರೆ ಯಾವ ವಾಹಿನಿಯಲ್ಲೂ ಜ್ಞಾನವೃದ್ಧಿಗೆ ಬೇಕಾದ ಕಾರ್ಯಕ್ರಮಗಳು ಮೂಡಿ ಬರುತ್ತಿಲ್ಲ. ಚಂದನ ಬಿಟ್ಟರೆ ಹಳೆಯ ಹಾಡುಗಳನ್ನು ಕೇಳುವವರಿಲ್ಲ. ಕಾಲ್ಪನಿಕ ಕಥೆಗಳನ್ನು ಹೊಸೆದು ಹೊಸೆದು 'ಘಮ'ವಿಲ್ಲದ ಹೂವಿನಂತಾಗಿವೆ. ಕೌಟುಂಬಿಕ ಸಂಬಂಧಗಳನ್ನು ಲೇವಡಿ ಮಾಡುವ ಧಾರಾವಾಹಿಗಳಿಂದ ಏನು ಪ್ರಯೋಜನ? ಕಲೆ, ಸಂಗೀತ, ಆರೋಗ್ಯ, ಸಂಸ್ಕೃತಿ, ಜಾನಪದ... ವಾರದ ಒಂದು ದಿನ ಕಾದಿರಿಸಿ ಕಾರ್ಯಕ್ರಮ ಪ್ರಸಾರ ಮಾಡಿದರೆ, ಅವಸಾನದ ಅಂಚಿನಲ್ಲಿರುವ ಕೆಲವು ಕಲಾ ಪ್ರಕಾರಗಳ ಅರಿವು ಇಂದಿನ ಪೀಳಿಗೆಗೆ ಆಗುತ್ತದೆ ಹಾಗೂ ಕೆಲವು ಬಡ ಕಲಾವಿದರಿಗೆ ನೆರವಾಗಬಹುದು.

ವೆಂಕಟೇಶ ಮುದಗಲ್, ಕಲಬುರಗಿ

## ಹಳಸಿದರೆ ಅಮೃತವೂ ರುಚಿಸದು

ಹೂ – ಹಣ್ಣು, ಭೋಜನ ಎಲ್ಲವೂ ತಾಜಾ ಇರುವಾಗಲೇ ರುಚಿ. ಸಿನಿಮಾಗಳೂ ಅಷ್ಟೆ. ಖಾಸಗಿ ವಾಹಿನಿಗಳ ಕಿರುತೆರೆಯಲ್ಲಿ ಹಿಂದಿನ ಯಾವುದರ ಮರು ಪ್ರಸಾರವೂ ಕಾಣುವುದಿಲ್ಲ. ಆದರೆ ನಮ್ಮ ಚಂದನ ಮಾತ್ರ ಇದಕ್ಕೆ ಹೊರತು. ಹಳೆಯದನ್ನೇ ಪ್ರಸಾರ ಮಾಡುವಲ್ಲಿ ಅದು ಎತ್ತಿದ ಕೈ. ಅ. 13ರ ಜಾಣರ ಪೆಟ್ಟಿಗೆಯಲ್ಲಿ ಮಲ್ಲಿಕಾರ್ಜುನ ದಾಖಲಿಸಿರುವಂತೆ ಬಯಾಸ್ಕೋಪ್‌ನಲ್ಲೂ ಹಳೆಯ ಸಿನಿಮಾ ತುಣುಕುಗಳನ್ನೇ ಮತ್ತೆ ಮತ್ತೆ ತೋರಿಸಿ ಬೋರ್ ಹೊಡಿಸುತ್ತಾರೆ. ಏಳು ಏಳೂವರೆಗೆ ಪ್ರಸಾರವಾಗುವ ಪ್ರಸಿದ್ಧ ಕತೆಗಳ ಆಧಾರಿತ ಧಾರಾವಾಹಿಗಳೂ ಅಷ್ಟೆ. ಸುಬ್ಬಣ್ಣ, ಅಕ್ಕು ಎಷ್ಟೋ ವರ್ಷಗಳ ಹಿಂದೆ ಪ್ರದರ್ಶಿತವಾಗಿದ್ದವು. ಮತ್ತೆ ಮತ್ತೆ ಅವೇ ಬೇಕೇ? ಅಂತಹ ಕತೆ ಆಧಾರಿತ ಧಾರಾವಾಹಿಗಳನ್ನು ಶರವೇಗದಲ್ಲಿ ಸುಧಾರಿಸುತ್ತಿರುವ ತಂತ್ರಜ್ಞಾನ ಉಪಯೋಗಿಸಿ ಚಿತ್ರಿಸಲು ಏನಾಗಿದೆ? ಖಾಸಗಿ ವಾಹಿನಿಗಳು ಹೊಸತನದಿಂದ ಸ್ಪರ್ಧೆ ನಡೆಸುತ್ತಿದ್ದರೆ ಅಡಗೂಲಜ್ಜಿಯಂತೆ ಸರ್ಕಾರ ಪೋಷಿತ ಚಂದನ ಮೂಲೆಗುಂಪಾಗುತ್ತಿರುವುದು ವಿಷಾದಕರ.

ಬಯಾಸ್ಕೋಪಿನಲ್ಲಿ ಹೊಸ ಹೊಸ ಚಿತ್ರಗಳು ಬರಲಿ.

—ಸತ್ಯಬೋಧ, ಬೆಂಗಳೂರು

## ಕನ್ನಡಮಯವಾಗಲಿ

ದೂರದರ್ಶನ ಚಂದನ ವಾಹಿನಿಯ 'ಥಟ್ ಅಂತ ಹೇಳಿ' ಯಾವಾಗಲೂ ಜನಪ್ರಿಯ ಕಾರ್ಯಕ್ರಮವೇ. ನಾ. ಸೋಮೇಶ್ವರ ಅವರು ಸಂಪೂರ್ಣ ಕನ್ನಡ ಶಬ್ದಗಳನ್ನೇ ಬಳಸಿ ಅತಿ ಕಡಿಮೆ ಇಂಗ್ಲಿಷ್ ಬಳಸುತ್ತಾರೆ. ಹೆಚ್ಚಿನ ಕನ್ನಡ ವಾಹಿನಿಗಳ ನಿರೂಪಕರು ಇದನ್ನು ಗಮನಿಸಬೇಕಾಗಿದೆ. ಹಾಗೇ ವಾಹಿನಿಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅರ್ಧ ಇಂಗ್ಲಿಷ್ ಮಿಶ್ರಿತ ಕನ್ನಡ ಮಾತನಾಡುವ ನಟ – ನಟಿಯರು ಕೂಡ ಈ ಕಾರ್ಯಕ್ರಮವನ್ನು ಆದರ್ಶವಾಗಿಟ್ಟುಕೊಂಡು ಅತಿ ಹೆಚ್ಚು ಕನ್ನಡ ಪದಗಳನ್ನು ಬಳಸಲು ಪ್ರಯತ್ನಿಸಬೇಕು. ಹೊಸ ಕನ್ನಡ ಶಬ್ದಗಳನ್ನು ಹುಟ್ಟುಹಾಕಬೇಕು. ಈ ವರ್ಷದ ರಾಜ್ಯೋತ್ಸವದಿಂದಲೇ ಇದು ಪ್ರಾರಂಭವಾಗಲಿ.

ಹಾಗೆಯೇ ಸೋಮೇಶ್ವರ್ 'ಬಜರ್' ಶಬ್ದ ಬಿಟ್ಟು ಕನ್ನಡ ಶಬ್ದ 'ಕರೆಗಂಟೆ' ಎಂದು ಹೇಳಿದರೆ ನಮಗೂ ಸಂತೋಷ.

—ಗ. ಮ. ತುಂಬೇಮನೆ, ಶಿರಸಿ